ಸ್ವಾತಂತ್ರ್ಯದ ಅಮೃತಮಹೋತ್ಸವ

ನವ ಭಾರತಕ್ಕಾಗಿ
ನವ ಕರ್ನಾಟಕ



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

# ಸರ್ವರ ವಿಕಾಸಕ್ಕಾಗಿ ಸಮೃದ್ಧ ಕರ್ನಾಟಕ ನಿರ್ಮಾಣ

## ನವ ಭಾರತದ ಆಶೋತ್ತರಗಳನ್ನು ನನಸು ಮಾಡಲು ಪಣ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ-ಬಲಿದಾನ ಸ್ಮರಿಸಿ, ಗೌರವ ಸಲ್ಲಿಸುವುದರ ಜೊತೆಗೆ ಅವರ ಕನಸಿನ ಭಾರತವನ್ನು ನನಸು ಮಾಡಲು ಪಣ ತೊಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಕಳೆದ 8 ವರ್ಷಗಳಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತ ಗುರುತರವಾದ ಸಾಧನೆ ಮಾಡಿದೆ. ಕರ್ನಾಟಕದಲ್ಲಿ ಸರ್ವರ ವಿಕಾಸಕ್ಕಾಗಿ ಸಮೃದ್ಧ ಕರ್ನಾಟಕ ನಿರ್ಮಾಣ ಮಾಡಲು ಶ್ರೀ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಪಣ ತೊಟ್ಟಿದ್ದು, ಹಲವಾರು ಜನಪರ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ.

### ರೈತರ ಹಿತರಕ್ಷಣೆ



- **ರೈತರ ಬಲವರ್ಧನೆಗಾಗಿ ಸೆಕೆಂಡರಿ ಕೃಷಿ ನಿರ್ದೇಶನಾಲಯ ಸ್ಥಾಪನೆ**
- **ರೈತ ಶಕ್ತಿ ಯೋಜನೆ:** ಕೃಷಿಯಲ್ಲಿ ಯಾಂತ್ರೀಕರಣವನ್ನು ಪ್ರೋತ್ಸಾಹಿಸಲು ಡೀಸೆಲ್ ಸಹಾಯಧನ. **ರೂ. 400 ಕೋಟಿ** ಅನುದಾನ. ಪ್ರತಿ ಎಕರೆಗೆ **ರೂ.250** ರಂತೆ ಗರಿಷ್ಠ 5 ಎಕರೆಗೆ ಸಹಾಯಧನ
- **ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ರಾಜ್ಯ ಸರ್ಕಾರ):** 2021-22ನೇ ಸಾಲಿನಲ್ಲಿ **50.35 ಲಕ್ಷ** ರೈತರಿಗೆ **ರೂ.1,975.12 ಕೋಟಿ** ವಿತರಣೆ. 2022-23ನೇ ಸಾಲಿನಲ್ಲಿ **47.83 ಲಕ್ಷ** ರೈತರಿಗೆ **ರೂ.956.71 ಕೋಟಿ** ಡಿಬಿಟಿ ಮೂಲಕ ವರ್ಗಾವಣೆ
- ಕೃಷಿ ಯಾಂತ್ರೀಕರಣ, ಕೃಷಿ ಉತ್ಪನ್ನ ಸಂಸ್ಕರಣೆ ಘಟಕಗಳಿಗೆ **ರೂ.483.56 ಕೋಟಿಗಳ** ಸಹಾಯಧನ ವಿತರಣೆ. **4.54 ಲಕ್ಷ** ರೈತರಿಗೆ ಪ್ರಯೋಜನ.
- **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ: 3.12 ಲಕ್ಷ** ರೈತರ ಜಮೀನುಗಳಲ್ಲಿ ಸೂಕ್ಷ್ಮ ನೀರಾವರಿ ಘಟಕಗಳ ಸ್ಥಾಪನೆ
- **ಕೃಷಿ ಸಂಜೀವಿನಿ ಯೋಜನೆ:** ರೈತರ ತಾಕುಗಳಲ್ಲಿ ಕೀಟ, ರೋಗ ಮತ್ತು ಕಳೆಗಳ ಬಾಧೆ ಹಾಗೂ ಮಣ್ಣಿನ ಪೋಷಕಾಂಶ ಕೊರತೆ ಹಾಗೂ ಸಮರ್ಪಕ ನಿರ್ವಹಣೆಗಾಗಿ **160 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ಲೋಕಾರ್ಪಣೆ**
- **ಕೃಷಿ ಮೂಲಸೌಕರ್ಯ ನಿಧಿ ಯೋಜನೆಗೆ ಪ್ರಶಸ್ತಿ**

### ಅಮೃತ ಮಹೋತ್ಸವ




- ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಅಮೃತ ಭಾರತಿಗೆ ಕನ್ನಡದಾರತಿ ಕಾರ್ಯಕ್ರಮ. ಸ್ವಾತಂತ್ರ್ಯ ಹೋರಾಟಗಾರರ ಕುರಿತ 75 **ಪುಸ್ತಕಗಳ** ಬಿಡುಗಡೆ.
- **ಸ್ವಾತಂತ್ರ್ಯ ಹೋರಾಟಗಾರರ 75 ಸ್ಥಳಗಳನ್ನು** ಗುರುತಿಸಿ ಸ್ಮಾರಕ ಸ್ಥಾಪನೆ. ಈ ಕುರಿತು ಪ್ರಧಾನಿ ಮೋದಿಯವರ ಮನ್-ಕಿ-ಬಾತ್ ಕಾರ್ಯಕ್ರಮದಲ್ಲಿ ಶ್ಲಾಘನೆ
- ಪ್ರಧಾನಿಯವರ **'ಹರ್ ಘರ್ ತಿರಂಗ'** ಅಭಿಯಾನ ಯಶಸ್ವಿಗೊಳಿಸಲು ಮಾಡಿದ ಮನವಿಗೆ ಸಾರ್ವಜನಿಕರಿಂದ ಅಭೂತಪೂರ್ವ ಸ್ಪಂದನೆ ಲಭಿಸಿದೆ. ಎಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು

### ವಿದ್ಯಾನಿಧಿ ಯೋಜನೆ



- **ರೈತರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ರೈತ ವಿದ್ಯಾನಿಧಿ ಯೋಜನೆ: ರೂ.439.95 ಕೋಟಿ** ವಿದ್ಯಾರ್ಥಿವೇತನ ಹಂಚಿಕೆ ಮಾಡಲಾಗಿದೆ. ಫಲಾನುಭವಿಗಳು – **10.03 ಲಕ್ಷ**. ಈ ಯೋಜನೆಯನ್ನು ಮೀನುಗಾರರು, ಹಳದಿ ಬೋರ್ಡ್ ಟ್ಯಾಕ್ಸಿ ಚಾಲಕರು ಹಾಗೂ ನೇಕಾರರ ಮಕ್ಕಳಿಗೂ ವಿಸ್ತರಿಸಲಾಗಿದೆ,

### ಮೀನುಗಾರಿಕೆ-ಹೈನುಗಾರಿಕೆ ರೇಷ್ಮೆಗೆ ಪ್ರೋತ್ಸಾಹ



- ಮೀನುಗಾರರ ಆದಾಯ ಹೆಚ್ಚಿಸಲು **100 ಆಳ ಸಮುದ್ರ ಮೀನುಗಾರಿಕಾ ದೋಣಿಗಳಿಗೆ** ನೆರವು ನೀಡುವ **"ಮತ್ಸ್ಯ ಸಿರಿ"** ಯೋಜನೆ
- ಹಾಲು ಉತ್ಪಾದಕರ ಅನುಕೂಲಕ್ಕೆ **ಕ್ಷೀರಸಮೃದ್ಧಿ ಸಹಕಾರ ಬ್ಯಾಂಕ್ ಯೋಜನೆ**
- ಪ್ರತಿ ಟನ್ ದ್ವಿತಳಿ ರೇಷ್ಮೆ ಗೂಡಿಗೆ **ರೂ.10 ಸಾವಿರ,** ದ್ವಿತಳಿ ಬಿತ್ತನೆ ಗೂಡಿಗೆ **ಕೆ.ಜಿ.ಗೆ ರೂ. 50 ಪ್ರೋತ್ಸಾಹಧನ** ಹೆಚ್ಚಳ

### ಶಿಕ್ಷಣಕ್ಕೆ ಮಹತ್ವ



- ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರುವಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ
- **ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಕೆಐಟಿ)ಗಳಾಗಿ** ರಾಜ್ಯದ **7 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಉನ್ನತೀಕರಣ**
- ರಾಜ್ಯದಲ್ಲಿ **ರೂ. 1,412 ಕೋಟಿ** ವೆಚ್ಚದಲ್ಲಿ **8,101 ಶಾಲಾ ಕೊಠಡಿ** ನಿರ್ಮಾಣದ ಐತಿಹಾಸಿಕ ಕ್ರಮ

### ಪರಿಶಿಷ್ಟ ಜಾತಿ-ಪಂಗಡಗಳು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರ ಕಲ್ಯಾಣ



- SCSP/TSP ಯೋಜನೆಗಳಿಗೆ ರೂ. 28,234 ಕೋಟಿ ಮೀಸಲು
- ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ ಅಭಿವೃದ್ಧಿ ನಿಗಮಗಳ ಯೋಜನೆಗಳಿಗೆ ಮೂಲ ಅನುದಾನ: ರೂ.580.19 ಕೋಟಿ. ಹೆಚ್ಚುವರಿ ಅನುದಾನ: ರೂ.410 ಕೋಟಿ. ಒಟ್ಟು ರೂ.990.19 ಕೋಟಿ
- ಬಡ ಪ.ಜಾತಿ/ಪಂಗಡಗಳಿಗೆ ನೀಡುತ್ತಿರುವ ಉಚಿತ ವಿದ್ಯುತ್ 45 ರಿಂದ 75 ಯೂನಿಟ್‌ಗಳಿಗೆ ಏರಿಕೆ. 39.25 ಲಕ್ಷ ಕುಟುಂಬಗಳಿಗೆ ಪ್ರಯೋಜನ
- ಲೋಕೋಪಯೋಗಿ ಇಲಾಖೆ SCSP/TSP ಯೋಜನೆಯಡಿ ಒದಗಿಸಿದ ಅನುದಾನದಿಂದ ರೂ. 750 ಕೋಟಿ ವೆಚ್ಚದಲ್ಲಿ 100 ಡಾ.ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿನಿಲಯ ಹಾಗೂ 10 KREIS (ವಸತಿ ಶಾಲೆಗಳ) ಕಟ್ಟಡಗಳ ನಿರ್ಮಾಣ.

### ಹಿಂದುಳಿದ ವರ್ಗಗಳ ಕಲ್ಯಾಣ


- ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆಗೆ 2022-23ನೇ ಸಾಲಿಗೆ ರೂ.2,249.66 ಕೋಟಿ ಹಂಚಿಕೆ
- ಎಲ್ಲಾ ನಿಗಮಗಳಿಗೆ 2022-23ನೇ ಸಾಲಿಗೆ ರೂ.478.09 ಕೋಟಿ ಹಂಚಿಕೆ
- 165 ಕೋಟಿ ರೂ. ವೆಚ್ಚದಲ್ಲಿ ಬಾಡಿಗೆ ಕಟ್ಟಡಗಳಲ್ಲಿರುವ ಹಿಂದುಳಿದ ವರ್ಗಗಳ 50 "ಕನಕದಾಸ" ವಿದ್ಯಾರ್ಥಿನಿಲಯಗಳಿಗೆ ಸುಸಜ್ಜಿತ ಕಟ್ಟಡ ನಿರ್ಮಾಣ.

### ನೇಕಾರರು ಹಾಗೂ ಕಟ್ಟಡ ಕಾರ್ಮಿಕರಿಗೆ ನೆರವು



- ನೇಕಾರ ಸಮ್ಮಾನ್ ನೆರವಿನ ಮೊತ್ತ ರೂ.2,000 ದಿಂದ **ರೂ.5,000**ಕ್ಕೆ ಹೆಚ್ಚಳ.
- ಕಟ್ಟಡ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ಯೋಜನೆ ಜಾರಿ. 2.97 ಲಕ್ಷ ವಿದ್ಯಾರ್ಥಿಗಳಿಗೆ ರೂ.462.12 ಕೋಟಿ

### ಕೃಷಿ ಉತ್ಪಾದನೆ ಪ್ರಮಾಣದಲ್ಲಿ ಹೆಚ್ಚಳ



- **2020-21**ನೇ ಸಾಲಿನಲ್ಲಿ ದಾಖಲೆ ಪ್ರಮಾಣದ **160.28** ಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆ.

### ಸ್ತ್ರೀ ಸಾಮರ್ಥ್ಯ ಯೋಜನೆ



- **33,333 ಸ್ವಸಹಾಯ ಗುಂಪುಗಳಿಗೆ ಉದ್ಯಮಶೀಲತೆಯನ್ನು ಮತ್ತಷ್ಟು ವೃದ್ಧಿಪಡಿಸಲು ತಲಾ ರೂ.1.5 ಲಕ್ಷದಂತೆ ಒಟ್ಟು ರೂ.500 ಕೋಟಿ ಸಮುದಾಯ ಬಂಡವಾಳ ನಿಧಿ ಬಿಡುಗಡೆ. ಸುಮಾರು 3.9 ಲಕ್ಷ ಮಹಿಳೆಯರಿಗೆ ಅನುಕೂಲ.**
- **ಅಮೃತ ಸ್ವಸಹಾಯ ಕಿರುಉದ್ದಿಮೆ ಯೋಜನೆಯಡಿ 7,500 ಮಹಿಳಾ ಸ್ವಸಹಾಯ ಗುಂಪುಗಳನ್ನು ಕಿರು ಉದ್ದಿಮೆ ಸಂಸ್ಥೆಗಳನ್ನಾಗಿ ರೂಪಿಸಲು ರೂ.75 ಕೋಟಿ ಬೀಜಧನ ಬಿಡುಗಡೆ.**

### ಆರೋಗ್ಯ-ಕುಟುಂಬ ಕಲ್ಯಾಣ



- **ಕೋವಿಡ್ ನಿಯಂತ್ರಣಕ್ಕಾಗಿ ವಿಶೇಷ ಕ್ರಮ. 11.56 ಕೋಟಿ ಕೋವಿಡ್ ಲಸಿಕೆಗಳ ಪೂರೈಕೆ**
- ಪ್ರಮುಖ ನಗರಗಳಲ್ಲಿ **438 'ನಮ್ಮ ಕ್ಲಿನಿಕ್'**ಗಳ ಆರಂಭ
- **ಸಮುದಾಯ ಆರೋಗ್ಯ ಕೇಂದ್ರಗಳಾಗಿ 100 ಪ್ರಾಥಮಿಕ ಆರೋಗ್ಯ ಕೇಂದ್ರಗಳ (71 ಉತ್ತರ ಕರ್ನಾಟಕ ಭಾಗದಲ್ಲಿ) ಉನ್ನತೀಕರಣ.**

### ಸಾಮಾಜಿಕ ಭದ್ರತೆ



- ಸಂಧ್ಯಾ ಸುರಕ್ಷಾ, ಮನಸ್ವಿನಿ ಮತ್ತು ಮೈತ್ರಿ ಯೋಜನೆ, ವಿಧವೆಯರು ಹಾಗೂ ವಿಶೇಷಚೇತನರ ಮಾಸಿಕ ಪಿಂಚಣಿ ಮೊತ್ತ ರೂ.200 ರಷ್ಟು ಹೆಚ್ಚಳ.
- ಆ್ಯಸಿಡ್ ದಾಳಿ ಸಂತ್ರಸ್ತರ ಮಾಸಾಶನ ರೂ.3,000 ದಿಂದ ರೂ.10,000ಕ್ಕೆ ಹೆಚ್ಚಳ.
- ಮನೋವೈಕಲ್ಯ: ಶೇ 75ಕ್ಕಿಂತ ಹೆಚ್ಚಿನ ಮನೋವೈಕಲ್ಯ ಹೊಂದಿರುವವರ ಪಿಂಚಣಿ ರೂ.1,400 ರಿಂದ ರೂ.2,000ಕ್ಕೆ ಹೆಚ್ಚಳ.
- ಒಟ್ಟಾರೆ 74.22 ಲಕ್ಷ ಜನರಿಗೆ ಅನುಕೂಲ
- ಆಶಾ, ಅಂಗನವಾಡಿ ಕಾರ್ಯಕರ್ತೆಯರು /ಸಹಾಯಕರು, ಬಿಸಿಯೂಟ ತಯಾರಕರು/ ಸಹಾಯಕರು, ಗ್ರಾಮ ಸಹಾಯಕರ ಗೌರವಧನ ರೂ.1,000 ರಷ್ಟು ಹೆಚ್ಚಳ.

### ಅಮೃತ ಯೋಜನೆಗಳು




- ಭಾರತದ 75ನೇ ಸ್ವಾತಂತ್ರ್ಯೋತ್ಸವದ ಸ್ಮರಣಾರ್ಥವಾಗಿ ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಅಮೃತ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.

### ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ



- ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ: ಪ್ರತಿ ಗ್ರಾಮ ಪಂಚಾಯತಿಗೊಂದರಂತೆ ಒಟ್ಟು 27,395 'ಸ್ವಾಮಿ ವಿವೇಕಾನಂದ ಸ್ವಸಹಾಯ ಗುಂಪು'ಗಳನ್ನು ರಚಿಸಿ ಸ್ವಯಂ ಉದ್ಯೋಗ ಹಾಗೂ ಆರ್ಥಿಕ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಯುವಕರನ್ನು ಪ್ರೋತ್ಸಾಹಿಸುವುದು.
- 65 ಲಕ್ಷ ಗ್ರಾಮೀಣ ಯುವಕರಿಗೆ ಕೌಶಲ್ಯ ತರಬೇತಿ ಗುರಿ.

### ಹೂಡಿಕೆಯಲ್ಲಿ ಕರ್ನಾಟಕ ನಂ. 1



- **ವಿದೇಶಿ ನೇರ ಹೂಡಿಕೆಯಲ್ಲಿ 1ನೇ ಸ್ಥಾನ.** ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆ ಮೂಲಕ ಹಾಗೂ ನಂತರದಲ್ಲಿ ಒಟ್ಟು **ರೂ.1.31 ಲಕ್ಷ ಕೋಟಿ** ಹೂಡಿಕೆಗಳ ಒಪ್ಪಂದಕ್ಕೆ ಸಹಿ
- ನೀತಿ ಆಯೋಗದ ಇಂಡಿಯಾ ಇನ್ನೊವೇಷನ್ ಸೂಚ್ಯಂಕ 2022ರಲ್ಲಿ **ರಾಜ್ಯಕ್ಕೆ 1ನೇ ಸ್ಥಾನ**
- ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲು ವಿಶೇಷ ಉದ್ಯೋಗ ನೀತಿ.

### ನಗರಾಭಿವೃದ್ಧಿಗೆ ಆದ್ಯತೆ



- ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ: ಬೆಂಗಳೂರು ನಗರದ ಮೂಲಭೂತ ಸೌಕರ್ಯದ ಅಭಿವೃದ್ಧಿಗೆ **ರೂ.6,000 ಕೋಟಿ**
- ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ: (ಸ್ಥಳೀಯ ಸಂಸ್ಥೆಗಳ ವ್ಯಾಪ್ತಿ) **ರೂ.3,885 ಕೋಟಿ**

### ಅಸಮಾನತೆ ನಿವಾರಣೆ

- **ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಅನುದಾನ ದ್ವಿಗುಣ. ರೂ.3,000 ಕೋಟಿ**




## ಸಮಸ್ತ ಜನತೆಗೆ 76ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ